# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ : ಮಂವಿ/ಕು.ಸ/ಸಿಂಡಿ(ಎಸ್1)/ 2/2021/18577

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ-574199
ದಿನಾಂಕ: 07.12. 2021

ಇವರಿಗೆ:

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು / ಸಂಯೋಜಕರು, ಮಂವಿವಿ, ಮಂಗಳಗಂಗೋತ್ರಿ.
2. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು / ಸಂಯೋಜಕರು, ಸ್ನಾತಕೋತ್ತರ ಕೇಂದ್ರ, "ಜ್ಞಾನ ಕಾವೇರಿ", ಚಿಕ್ಕ ಅಳುವಾರ, ತೋರೆನೂರು ಪೋಸ್ಟ್ – ೫೭೧೨೩೨, ಕುಶಾಲನಗರ, ಸೋಮವಾರ ಪೇಟೆ, ಕೊಡಗು
3. ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳ ಸಂಯೋಜಕರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು / ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು / ಎಫ್.ಎಂ.ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ.
4. ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ಮಂಗಳೂರು ವಿಶ್ವವಿದ್ಯಾನಿಲಯ
5. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು / ಎಫ್.ಎಂ.ಕೆ.ಎಂ .ಕಾರ್ಯಪ್ಪ ಕಾಲೇಜು, ಮಡಿಕೇರಿ/ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು / ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ / ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ.

ಮಾನ್ಯರೇ,

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ವಿದ್ಯಾರ್ಥಿ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡುವ ಬಗ್ಗೆ.

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 30(1)(x) ಮತ್ತು ಸಂಬಂಧಿತ ಪರಿನಿಯಮದ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಈ ಕೆಳಗಿನಂತೆ ವಿದ್ಯಾರ್ಥಿ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡಬೇಕಾಗಿರುತ್ತದೆ.

1) ಪದವಿ ವ್ಯಾಸಂಗದ ಒಬ್ಬ ವಿದ್ಯಾರ್ಥಿ (One shall be a student of degree course)
2) ಸ್ನಾತಕೋತ್ತರ ಪದವಿಯ ಒಬ್ಬ ವಿದ್ಯಾರ್ಥಿ (One shall be a student of post graduate course)
3) ವೃತ್ತಿಪರ ವ್ಯಾಸಂಗದ ಒಬ್ಬ ವಿದ್ಯಾರ್ಥಿ (One shall be a student of Professional course)
4) ನ್ಯಾಷನಲ್ ಕೆಡೆಟ್ ಕೋರ್‌ನ ಒಬ್ಬ ಅಭ್ಯರ್ಥಿ (One shall be candidate of National Cadet Corps)
5) ನ್ಯಾಷನಲ್ ಸೋಷಿಯಲ್ ಸರ್ವೀಸ್‌ನ ಒಬ್ಬ ಅಭ್ಯರ್ಥಿ (One shall be a Candidate of national social service)

ಆದುದರಿಂದ ಪರಿನಿಯಮದಲ್ಲಿ ತಿಳಿಸಿದ ಪ್ರಕಾರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ದಿನಾಂಕ 30.12.2021 ರೊಳಗಾಗಿ ಇ-ಮೇಲ್ ಮುಖಾಂತರ sndmu2012gmail.com ಗೆ ಕಳುಹಿಸಿಕೊಡುವಂತೆ ತಿಳಿಸಲಾಗಿದೆ. **ನಿಗದಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.**

ಪರಿನಿಯಮದ ಪ್ರತಿ ಮತ್ತು ಅರ್ಜಿ ನಮೂನೆಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ ವೆಬ್ ಸೈಟ್ ವಿಳಾಸ www.mangaloreuniversity.ac.in ನಿಂದ ಪಡೆದುಕೊಳ್ಳುವುದು.

ಸೂಚನೆ: ಅರ್ಜಿ ನಮೂನೆಗಳನ್ನು **MS-word format** ನಲ್ಲಿ ಭರ್ತಿಗೊಳಿಸಿ ಪ್ರಾಂಶುಪಾಲರ ಸಹಿಯೊಂದಿಗೆ ಸಲ್ಲಿಸುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಪ್ರತಿ:

1. ಸಂಯೋಜಕರು, ಗಣಕಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ – ಮಾಹಿತಿಯನ್ನು ವೆಬ್ ಸೈಟಿನಲ್ಲಿ ಪ್ರಕಟಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ.
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ / ವಿದ್ಯಾರ್ಥಿ ಕ್ಷೇಮಪಾಲನೆ, ಮಂಗಳೂರು ವಿಶ್ವವಿದ್ಯಾನಿಲಯ
3. ಕುಲಪತಿಯವರ ಆಪ್ತ ಸಹಾಯಕಿ/ಕುಲಸಚಿವರ ಆಪ್ತ ಸಹಾಯಕಿ, ಮಂಗಳೂರು ವಿಶ್ವವಿದ್ಯಾನಿಲಯ,